ಶಿರಹಟ್ಟಿ	2
ರೋಣ	2
ಗದಗ್	2
ಮುಂಡರಗಿ	1
ಉತ್ತರ ಕನ್ನಡ ಜಿಲ್ಲೆ	
ಕುಮಟಾ	--
ಹಳಿಯಾಳ	1
ಶಿರಸಿ	--
ಹೊನ್ನಾವರ	--
ಭಟ್ಕಳ	--
ಜೋಯ್ಡಾ	1
ಅಂಕೋಲಾ	--
ಕಾರವಾರ	--
ಮುಂಡಗೋಡು	--
ಸಿದ್ದಾಪುರ	1
ಯಲ್ಲಾಪುರ	--
	101

512 (480) ಶ್ರೀ ಬಾಲರಾಜ್.ಎಸ್. (ಕೊಳ್ಳೇಗಾಲ) :- ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ಕ್ಷೇತ್ರದ ಧನಗೆರೆ ಜಹಗೀರ್‌ದಾರ್ ಅಣೆಕಟ್ಟನ್ನು ಅಭಿವೃದ್ಧಿಪಡಿಸದೇ ಇರುವುದರಿಂದ ಈ ಚಾನಲ್‌ನಲ್ಲಿ ನೀರು ಹರಿಸಲು ಕಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಅಣೆಕಟ್ಟು ಅಭಿವೃದ್ಧಿಪಡಿಸಲು ಈ ಸಾಲಿನಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) :

ಅ) ಹೌದು.

ಆ) ನಿಗಮದ ಅಧೀನದಲ್ಲಿರುವ 11 ರಿಂದ 19ನೇ ಶತಮಾನದಲ್ಲಿ ನಿರ್ಮಿಸಲಾಗಿರುವ ಜಹಗೀರ್‌ದಾರ್ ಅಣೆಕಟ್ಟು ಹಾಗೂ ಅದರ ನಾಲೆಗಳ ಆಧುನೀಕರಣವನ್ನು ಉದ್ದೇಶಿಸಲಾಗಿದ್ದು, ಇದಕ್ಕಾಗಿ ಸರ್ವೆ, ಅಂದಾಜು ತಯಾರಿಕೆ ಇತ್ಯಾದಿಗಾಗಿ ಟೆಂಡರ್ ಕರೆಯಲಾಗಿದೆ.

513 (1168) ಶ್ರೀ ಬಾಲರಾಜ್.ಎಸ್. (ಕೊಳ್ಳೇಗಾಲ) :– ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕ್ಕರೆ ಸೆಸ್‌ನಿಂದ ರಸ್ತೆಗಳ ನಿರ್ಮಿಸುವಂತೆ ಕಳೆದ ಸಾಲಿನಲ್ಲಿ ಹಣ ನಿಗಧಿಪಡಿಸಿ, ಕಾಮಗಾರಿ ಕೈಗೊಳ್ಳುವಂತೆ ಸೂಚಿಸಿದ್ದರು ಪೂರ್ಣ ಮಾಹಿತಿಯನ್ನು ನೀಡದಿರಲು ಕಾರಣವೇನು;

ಆ) ಕಳೆದ 3 ವರ್ಷಗಳಲ್ಲಿ ನನ್ನ ಕ್ಷೇತ್ರಕ್ಕೆ ಸಕ್ಕರೆ ಸಾಗಾಣಿಕೆಯ ಆಧಾರದ ಮೇಲೆ ಹಣ ನಿಗಧಿಪಡಿಸಿಲ್ಲದಿರಲು ಕಾರಣಗಳೇನು;

ಇ) ಈ ಸಾಲಿನಲ್ಲಿ ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್.ಎ. ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು) :

ಅ) ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ನುರಿಸುವ ಪ್ರತಿ ಟನ್ ಕಬ್ಬಿಗೆ ರೂ.10/– ರಂತೆ ರಸ್ತೆ ಕರವನ್ನು ಸಂಗ್ರಹಿಸಲಾಗುತ್ತಿದ್ದು, ಈ ಹಣವನ್ನು ಆಯಾ ಕಾರ್ಖಾನೆಗಳ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗಾಗಿ ಉಪಯೋಗಿಸಲಾಗುತ್ತಿದೆ.

2006–07ನೇ ಸಾಲಿನಲ್ಲಿ ಸರ್ಕಾರದಿಂದ ಒಟ್ಟು ರೂ.100.00 ಲಕ್ಷಗಳು ಮಾತ್ರ ಬಿಡುಗಡೆ ಆಗಿದ್ದು, ಇದರಲ್ಲಿ ರೂ.53.00 ಲಕ್ಷಗಳು ವಿವಿಧ ಜಿಲ್ಲಾ ಪಂಚಾಯತ್ ಕಾಮಗಾರಿಗಳಿಗೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದಿಂದ ಬಿಡುಗಡೆ ಮಾಡಿದ್ದು, 47.00 ಲಕ್ಷಗಳು ಸರ್ಕಾರದಿಂದ ಐಜಿಎ ಮುಖಾಂತರ ಬಿಡುಗಡೆ ಆಗಿರುತ್ತದೆ.